**ವಿಷಯ: ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಕೋಟ ಶ್ರೀನಿವಾಸ ಪೂಜಾರಿ, ಇವರು ನಿಯಮ 72 ರ ಅಡಿಯಲ್ಲಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ ನೀಡುವ ಬಗ್ಗೆ.**

**ಸೂಚನೆ:**

ರಾಜ್ಯದಲ್ಲಿ ಸರ್ಕಾರಿ ನೌಕರರ ಅಕಾಲಿಕ ವರ್ಗಾವಣೆ ಮಿತಿಮೀರಿದ್ದು, ವರ್ಗಾವಣೆಯ ಹಿಂದೆ ಭ್ರಷ್ಟಾಚಾರದ ಆರೋಪಗಳು ಕೇಳಿ ಬರುತ್ತಿರುವ ಹಿನ್ನೆಲೆಯಲ್ಲಿ ಮಾನ್ಯ ಮುಖ್ಯಮಂತ್ರಿಯವರ ಗಮನ ಸೆಳೆಯುವುದು.

**ಸರ್ಕಾರದ ಉತ್ತರ :**

ಆಡಳಿತದಲ್ಲಿ ಹೆಚ್ಚಿನ ಹೊಣೆಗಾರಿಕೆ ಮತ್ತು ಪಾರದರ್ಶಕತೆಯನ್ನು ತರುವುದು ಅವಶ್ಯಕವಾಗಿರುವುದರಿಂದ ಹಾಗೂ ಸರ್ಕಾರಿ ನೌಕರರನ್ನು ಇಡೀ. ರಾಜ್ಯದ ವ್ಯಾಪ್ತಿಯಲ್ಲಿ ಏಕರೂಪವಾಗಿ ಮತ್ತು ಸಮನಾಗಿ ಹಂಚಿಕೆ ಮಾಡಿ ನೇಮಿಸಿ ಸರ್ಕಾರವು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲು ಸರ್ಕಾರಿ ನೌಕರರ ವರ್ಗಾವಣೆಗಳನ್ನು ನಿಯಂತ್ರಿಸುವ ಬಗ್ಗೆ ಮಾರ್ಗಸೂಚಿಗಳನ್ನು ಹೊರಡಿಸುವುದು ಅವಶ್ಯಕವೆಂದು ಕಂಡು ಬಂದ ಹಿನ್ನೆಲೆಯಲ್ಲಿ ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 22 ಸೇನೌವ 2013 ದಿನಾಂಕ: 07.06.2013ರಲ್ಲಿ ಮಾರ್ಗಸೂಚಿಗಳನ್ನು ನೀಡಲಾಗಿದೆ. ವರ್ಗಾವಣೆಗಳನ್ನು ಸಕ್ಷಮ ಪ್ರಾಧಿಕಾರವು ಸದರಿ ಆದೇಶದಲ್ಲಿ ನಮೂದಿಸಿರುವ ಷರತ್ತುಗೊಳಪಟ್ಟು, ಪಾರದರ್ಶಕವಾಗಿ ಮಾಡಬೇಕಾಗಿರುತ್ತದೆ.

ದಿನಾಂಕ: 07.06.2013ರ ಸರ್ಕಾರಿ ಆದೇಶದ ಕಂಡಿಕೆ 9(ಅ)ರಲ್ಲಿ ವಿವರಿಸಿರುವ ಸಂದರ್ಭಗಳಲ್ಲಿ ಮಾಡುವ ಅವಧಿಪೂರ್ವ / ಅವಧಿಮೀರಿದ ವರ್ಗಾವಣೆಗಳನ್ನು ಹಾಗೂ ಸಾರ್ವತ್ರಿಕ ವರ್ಗಾವಣೆಯ ಅವಧಿ ಮುಗಿದ ನಂತರ ಮಾಡುವ ವರ್ಗಾವಣೆಗಳನ್ನು ಮುಖ್ಯಮಂತ್ರಿಯವರ ಪೂರ್ವಾನುಮೋದನೆಯನ್ನು ಪಡೆದ ನಂತರವೇ ಮಾಡಬೇಕಾಗಿರುತ್ತದೆ.

**ಸಂಖ್ಯೆ: ಸಿಆಸುಇ 27 ಸೇನೌವ 2023**

(ಸಿದ್ದರಾಮಯ್ಯ)
ಮುಖ್ಯಮಂತ್ರಿ